ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1910/2021

ಚಾಸಾಃ2 ಪ್ರಾಸಾಃ1

ದಿನಾಂಕಃ 05.12.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಶ್ರೀಕಾಂತ್ |
| ತಂದೆಯ ಹೆಸರು | : | ಭಾಸ್ಕರ್ ಶೆಟ್ಟಿ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಆಜ್ರಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ಆರೋಪಿಯ ಪರಿಚಯವಿದೆ. ಆತನ ಮನೆ ನಮ್ಮ ಅಂಗಡಿಯಾದ ಪಂಚಾಯಿತಿ ಕಟ್ಟಡದ ಪಕ್ಕ ಇರುತ್ತದೆ. ಅಬಕಾರಿ ಪೊಲೀಸರಾದ 3 ಜನರು ಅಲ್ಲಿಗೆ ಭೇಟಿದಾಗ ನನ್ನನ್ನು ಕೋರಿ ಸಹಿ ಪಡೆದಿರುತ್ತಾರೆ.

ಸಾಕ್ಷಿಗೆ ಕಡತದಲ್ಲಿರುವ ಸ್ಥಳ ಪಂಚನಾಮೆ ಮತ್ತು ಸ್ವತ್ತು ಪಟ್ಟಿಯ 2 ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ನಿಪಿ-1 ಮತ್ತು 2 ಎಂದು, ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

ಸಾಕ್ಷಿಗೆ 2 ಮೊಹರು ಮಾಡಿರುವ ವಸ್ತುಗಳನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮುಮಾ1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ಮುಮಾ1(ಎ) ಮತ್ತು ಮುಮಾ2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 02-10-2020 ರಂದು ಅಬಕಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಇಲಾಖಾ ಸಿಬ್ಬಂದಿಯವರೊಂದಿಗೆ ಸಹಕರಿ ಅವರು ಸದ್ರಿ ದಿನ ಸಂಜೆ 6-30 ರಿಂದ 7-30ರವರೆಗೆ ಜರುಗಿಸಿದ ಪಂಚನಾಮೆಗೆ ಸಹಕರಿಸಿ ಆ ವೇಳೆಗೆ ಸ್ಥಳದಲ್ಲಿ ದೊರೆದಂತಹ 180 ಎಂ ಎಲ್ ನ ಮೈಸೂರು ಲ್ಯಾನ್ಸರ್ Whiskey ಯ 48 ಟೇಟ್ರಾ ಪ್ಯಾಕೇಟುಗಳು ಹಾಗೂ 90 ಎಂ ಎಲ್ ನ ಮೈಸೂರು ಲ್ಯಾನ್ಸರ್ Whiskey ಯ 48 ಟೇಟ್ರಾ ಪ್ಯಾಕೇಟುಗಳೊಂದಿಗೆ ಒಂದು ಬಿಳಿ ಬಣ್ಣದ ಪಾಲಿಥೀನ್ ಚೀಲವನ್ನು ವಶಕ್ಕೆ ಪಡೆದು ಪಟ್ಟಿಯಲ್ಲಿ ನಮೂದಿಸಿ ಸ್ಥಳದಲ್ಲಿ ಅವುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಪ್ರತ್ಯೇಕಗೊಳಿಸಿ ಇಲಾಖಾ ಮೊಹರು ಮಾಡಿ ಅದಕ್ಕೆ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಸದ್ರಿ ಕ್ರಮವನ್ನು ಆರೋಪಿಯು ಆತನ ಅಂಗಡಿಯಲ್ಲಿ ಇಟ್ಟು ಕೊಂಡಿದ್ದ ಅಕ್ರಮ ಮದ್ಯದ ಸಂಬಂಧ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅನಂತರದಲ್ಲಿ ಅಬಕಾರಿ ಪೊಲೀಸರು ನಿಪಿ-1, 2 ಮುಮಾ1 ಮತ್ತು 2ಕ್ಕೆ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಅದನ್ನು ಶೇಖರಿಸಿಟ್ಟಿದ್ದು ಪೊಲೀಸರು ಆತನ ಮನೆಗೆ ದಾಳಿ ನಡೆಸಲು ಸಹಕರಿಸುವಂತೆ ನನ್ನನ್ನು ಕೋರಿದ್ದು ನಾನು ಹಾಜರು ಇದ್ದು ನನ್ನ ಸಮಕ್ಷಮ ಮೇಲೆ ಹೇಳಿದ ಕ್ರಮಗಳನ್ನು ವಹಿಸಿದರೂ ಸಹ ಆರೋಪಿ ಪರಿಚಯಸ್ಥನಾಗಿದ್ದು ಹಾಗೂ ನಮ್ಮ ಗ್ರಾಮಸ್ಥನಾಗಿದ್ದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಟಿ ಜಿ ಆರ್ ರವರಿಂದಃ**

ಮುಮಾ1 ಮತ್ತು 2ರೊಳಗೆ ಏನು ಶೇಖರಿಸಲಾಗಿದೆ ಎಂದು ನನಗೆ ತಿಳಿದಿಲ್ಲ. ಅದಕ್ಕೆ ನಾನು ಯಾವುದೇ ಸಹಿ ಮಾಡಿಲ್ಲ. ಅವುಗಳನ್ನು ಎಲ್ಲಿ ಸ್ವಾಧೀನಪಡಿಸಿಕೊಂಡರು ಎಂದು ನನಗೆ ತಿಳಿದಿಲ್ಲ. ನನ್ನ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**